## ಸೂಕ್ತಿಪ್ರಭ

### ಬುದ್ಧನ ಬೋಧನೆಗಳು

ನುಡಿದಂತೆ ನಡೆಯುವವನ ಸುಂದರವಾದ ಅರ್ಥಪೂರ್ಣ ಮಾತುಗಳು ಬಣ್ಣಬಣ್ಣದಿಂದ ಕೂಡಿದ, ಸುವಾಸನೆಯುಕ್ತ ಸುಂದರವಾದ ಹೂವಿನಂತೆ.

❊ ❊

ನೀರು ಹಾಯಿಸುವವರು ನೀರನ್ನು ಬೇಕಾದ ಕಡೆ ಒಯ್ಯುತ್ತಾರೆ. ಬಡಗಿಗಳು ಮರವನ್ನು ಬೇಕಾದಂತೆ ಮಾರ್ಪಡಿಸುತ್ತಾರೆ. ಇದರಂತೆ ಪಂಡಿತರು ತಮ್ಮನ್ನು ತಾವೇ ತಿದ್ದಿಕೊಳ್ಳುತ್ತಾರೆ.

❊ ❊

ಜಾಣನಾದವನು ಒಂದೇ ಮುಹೂರ್ತದವರೆಗೆ ಪಂಡಿತನ ಸಹವಾಸದಲ್ಲಿದ್ದರೂ ಸಾಕು, ನಾಲಿಗೆಯು ತೊವ್ವೆಯ ಸವಿಯನ್ನು ಅರಿತುಕೊಳ್ಳುವಂತೆ, ಬೇಗನೆ ಧರ್ಮವನ್ನು ಅರಿತುಕೊಳ್ಳುವನು.

❊ ❊

ಒಂದೊಂದು ತೊಟ್ಟನಂತೆ ನೀರು ಹನಿಯುತ್ತಿದ್ದರೆ ದೊಡ್ಡ ಕೊಡವೂ ತುಂಬುವುದು. ಹಾಗೆಯೇ ಜಾಣನಾದವನು ಸ್ವಲ್ಪ ಸ್ವಲ್ಪವಾಗಿಯೇ ಪುಣ್ಯವನ್ನು ಕೂಡಿಹಾಕುತ್ತಿದ್ದರೂ ಅವನು ಪುಣ್ಯದಿಂದ ತುಂಬಿಹೋಗುವನು.

❊ ❊

ಯೌವನದಲ್ಲಿಯೇ ಸಾಧನೆಗಳನ್ನು ಮಾಡದವರು, ಸಂಪತ್ತನ್ನು ಗಳಿಸದವರು, ಮೀನಿಲ್ಲದ ಕೊಳದಲ್ಲಿ ಮುದಿ ಬಕಪಕ್ಷಿಯಂತೆ ನಾಶವಾಗುವರು.

❊ ❊

ಸಾರಥಿಯಿಂದ ಪಳಗಿಸಿದ ಕುದುರೆಗಳಂತೆ ಯಾವನ ಇಂದ್ರಿಯಗಳು ಶಾಂತಿಯನ್ನು ಹೊಂದಿರುವುವೊ, ಯಾವನು ಅಭಿಮಾನವನ್ನು ತೊರೆದು ಇಂದ್ರಿಯ ಚಾಪಲ್ಯದಿಂದ ಮುಕ್ತನಾಗಿರುವನೊ ಅಂಥ ಜ್ಞಾನಿಯನ್ನು ಕಂಡರೆ ದೇವತೆಗಳಿಗೂ ಅವನಂತಿರಬೇಕೆಂಬ ಆಸೆಯಾಗುವುದು.

❊ ❊

ಆರೋಗ್ಯವೇ ಎಲ್ಲಕ್ಕೂ ಹೆಚ್ಚಿನ ಲಾಭ; ತೃಪ್ತಿಯೇ ಎಲ್ಲಕ್ಕಿಂತ ಉತ್ತಮ ಧನ; ವಿಶ್ವಾಸವೇ ಹೆಚ್ಚಿನ ನೆಂಟನು; ನಿರ್ವಾಣವೇ ಅತ್ಯುತ್ತಮ ಸುಖವು.

❊ ❊

"ಧಮ್ಮಪದ"ದಿಂದ

## ಪ್ರಾರ್ಥನೆ

### ಶ್ರೀಬುದ್ಧದೇವಸ್ತೋತ್ರಮ್

ನ ಬ್ರಹ್ಮಲೋಕೇ ನ ಚ ದೇವಲೋಕೇ
ನ ಯಕ್ಷಗಂಧರ್ವಮನುಷ್ಯಲೋಕೇ ।
ಲೋಕಸ್ಯ ಜಾತಿಜರಾಪನೇತಾ
ನಾನ್ಯೋಽಸ್ತಿ ತ್ವತ್ತೋ ಹಿ ಮನುಷ್ಯಚಂದ್ರ ॥

ನರರ ಮಧ್ಯೆ ಚಂದ್ರಮನಂತೆ ಬೆಳಗುತ್ತಿರುವ ಹೇ ಬುದ್ಧದೇವ! ಬ್ರಹ್ಮಲೋಕದಲ್ಲಾಗಲಿ, ದೇವಲೋಕದಲ್ಲಾಗಲಿ, ಯಕ್ಷಗಂಧರ್ವಮನುಷ್ಯಲೋಕಗಳಲ್ಲಿ ಕೂಡ ನಿನ್ನನ್ನು ಬಿಟ್ಟರೆ, ಈ ಪ್ರಪಂಚದಲ್ಲಿನ ಹುಟ್ಟು ಮುಪ್ಪುಗಳನ್ನು ಹೋಗಲಾಡಿಸುವವರು ಬೇರೊಬ್ಬರಿಲ್ಲವಷ್ಟೆ!

ಲೋಕೇ ಕ್ಲೇಶಾಗ್ನಿಸಂತಪ್ತೇ ಪ್ರಾದುರ್ಭೂತೋ ಮಹಾಪ್ರದಃ ।
ನಮೋಽಸ್ತು ಬೋಧಿಸತ್ತ್ವಾಯ ಸಂಬುದ್ಧಾಯ ನಮೋ ನಮಃ ॥

ದುಃಖಾಗ್ನಿಯಿಂದ ಸಂತಪ್ತವಾಗಿರುವ ಈ ಲೋಕದಲ್ಲಿ ಮಹಾ ಸಾಗರದಂತೆ ಉದ್ಭವಿಸಿದ, ಸಂಬುದ್ಧ (ಪರಿಪೂರ್ಣ ಜ್ಞಾನವುಳ್ಳವ)ನಾದ ಬೋಧಿಸತ್ತ್ವನಿಗೆ ಮತ್ತೆ ಮತ್ತೆ ನಮಸ್ಕಾರಗಳು.

ಅಜ್ಞಾನತಿಮಿರೇ ಲೋಕೇ ಪ್ರಾದುರ್ಭೂತಃ ಪ್ರದೀಪಕಃ ।
ನಮೋಽಸ್ತು ಬೋಧಿಸತ್ತ್ವಾಯ ಸಂಬುದ್ಧಾಯ ನಮೋ ನಮಃ ॥

ಅಜ್ಞಾನದ ಗಾಡಾಂಧಕಾರದಲ್ಲಿ ಮುಳುಗಿರುವ ಈ ಲೋಕದಲ್ಲಿ ಉಜ್ವಲ ದೀಪದಂತೆ ಆವಿರ್ಭವಿಸಿದ ಸಂಬುದ್ಧನಾದ ಬೋಧಿಸತ್ತ್ವನಿಗೆ ಮತ್ತೆ ಮತ್ತೆ ನಮಸ್ಕಾರಗಳು.

ಕ್ಲೇಶಬಂಧನ ಬದ್ಧಾನಾಂ ಪ್ರಾದುರ್ಭೂತಃ ಪ್ರಮೋಚಕಃ ।
ನಮೋಽಸ್ತು ಬೋಧಿಸತ್ತ್ವಾಯ ಸಂಬುದ್ಧಾಯ ನಮೋ ನಮಃ ॥

ಕ್ಲೇಶಗಳೆಂಬ ಬಂಧನದಲ್ಲಿ ಸಿಲುಕಿರುವವರನ್ನು ವಿಮೋಚನಗೊಳಿಸಲೆಂದೇ ಉದ್ಭವಿಸಿರುವ ಸಂಬುದ್ಧನಾದ ಬೋಧಿಸತ್ತ್ವನಿಗೆ ಮತ್ತೆ ಮತ್ತೆ ನಮಸ್ಕಾರಗಳು.

ಜರಾವ್ಯಾಧಿಕಿಲ್ಬಿಷಾಣಾಂ ಪ್ರಾದುರ್ಭೂತೋ ಭಿಷಗ್ವರಃ ।
ನಮೋಽಸ್ತು ಬೋಧಿಸತ್ತ್ವಾಯ ಸಂಬುದ್ಧಾಯ ನಮೋ ನಮಃ ॥

ಮುಪ್ಪು, ವ್ಯಾಧಿಗಳೆಂಬ ಆಪತ್ತುಗಳಿಗೆ ಶ್ರೇಷ್ಠವೈದ್ಯನಾಗಿ ಉದ್ಭವಿಸಿರುವ ಸಂಬುದ್ಧನಾದ ಬೋಧಿಸತ್ತ್ವನಿಗೆ ಮತ್ತೆ ಮತ್ತೆ ನಮಸ್ಕಾರಗಳು.